ಶ್ರೀ ಕಾಗೋಡು ತಿಮ್ಮಪ್ಪ : ಈಗ ಇರತಕ್ಕಂಥದ್ದು ಆರೋಗ್ಯ ಘಟಕ. ಈ ಸಾರಿ ಎಲ್ಲಾ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ಕೆಲಸವನ್ನು ಮಾಡಲಾಗುವುದು.

ಶ್ರೀ ಎನ್. ಚಿಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾಗಮಂಗಲ ತಾಲ್ಲೂಕಿನ ಬನ್ನೇನಹಳ್ಳಿ ಹೋಬಳಿ ಕೇಂದ್ರದಲ್ಲಿ ಒಂದು ಹೆರಿಗೆ ಆಸ್ಪತ್ರೆ ಕೆಲಸ ಕಂಪ್ಲೀಟ್ ಆಗಿ ಎರಡು ವರ್ಷಗಳಾಗಿವೆ. ಹುದ್ದೆ ಮಂಜೂರಾಗಿ ಒಂದು ವರ್ಷವಾಗಿದೆ. ಸ್ಟಾಫ್ ಮತ್ತು ವೈದ್ಯರನ್ನು ಭರ್ತಿ ಮಾಡದೇ ಇರುವುದರಿಂದ ಸ್ಥಳೀಯ ಜನರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಬನ್ನೇನಹಳ್ಳಿ ಹೋಬಳಿ ಕೇಂದ್ರ ಅದು. ದಯಮಾಡಿ ಸಚಿವರು ಅದಕ್ಕೆ ಉತ್ತರ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಹೇಳಿರುವುದಕ್ಕೆ ಸಂಬಂಧಪಟ್ಟಂತೆ ಖಂಡಿತ ಗಮನಹರಿಸುತ್ತೇನೆ.

ಶ್ರೀ ಎ. ಪಾಪಣ್ಣ : ಈಗಾಗಲೇ ಈ ವಿಷಯವನ್ನು ಹೇಳಿದ್ದೆ. ಎಲ್.ಹೆಚ್.ನಲ್ಲಿ ಒಬ್ಬರು ಗರ್ಭಿಣಿ ವೈದ್ಯರು ಇದ್ದಾರೆ. ಇವರನ್ನು ಬೇರೆ ಕಡೆ ಹಾಕಿ, ಇಲ್ಲಿ ಅವರ ಅಗತ್ಯವಿಲ್ಲವೆಂದು ಹೇಳಿ ಆರು ತಿಂಗಳಾಯಿತು. ಅವರನ್ನು ಸುಮ್ಮನೇ ಕೂರಿಸಿದ್ದಾರೆ, ದಯಮಾಡಿ ಅವರನ್ನು ಈಗಲಾದರೂ ಬೇರೆ ಕಡೆಗೆ ಹಾಕಿ.

ಅಧ್ಯಕ್ಷರು : ಪರಿಶೀಲಿಸುತ್ತೇವೆ ಎಂದು ಹೇಳಿ ಬಿಡಿ. ಆ ಪ್ರಶ್ನೆಗೆ ಉತ್ತರ ಬೇಡ. ಈಗ ಮುಂದಿನ ಪ್ರಶ್ನೆ ಚೌಡರೆಡ್ಡಿಯವರದ್ದು.

ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು

23 (117) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಕುಡಿಯುವ ನೀರಿಗೆ ಅಭಾವವಿದ್ದು ಮತ್ತು ಸಿಗುವ ನೀರಿನಲ್ಲಿ ಫ್ಲೋರೈಡ್ ಮಿಶ್ರಿತ ಲವಣಗಳಿಂದ ಕೂಡಿದ ನೀರನ್ನು ಕುಡಿದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಮತ್ತು ಎಷ್ಟು ದಿನಗಳಲ್ಲಿ ಪರಿಹಾರ ನೀಡುತ್ತದೆ ಎಂಬುದನ್ನು ತಿಳಿಸಲಾಗುವುದೆ;

ಇ) 2001-02 ನೇ ಸಾಲಿನಲ್ಲಿ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಚೇಳೂರು ಹೋಬಳಿಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಮತ್ತು ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂಬುದರ ವಿವರಗಳನ್ನು ನೀಡುವುದು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಸದ್ಯಕ್ಕೆ ಕುಡಿಯುವ ನೀರಿನ ಅಭಾವವಿರುವುದಿಲ್ಲ. ಸದರಿ ಹೋಬಳಿಯ ಕೆಲವು ಗ್ರಾಮಗಳಲ್ಲಿಯ ಕೊಳವೆಬಾವಿಗಳ ನೀರಿನಲ್ಲಿ

ಅಧಿಕ ಫ್ಲೋರೈಡಿನ ಅಂಶವಿರುವುದು ಮತ್ತು ಇದರಿಂದಾಗಿ ಗ್ರಾಮೀಣ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕುಡಿಯುವ ನೀರಿನಲ್ಲಿ ಗುಣಮಟ್ಟ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ದೂರದ ಕೊಳವೆಬಾವಿಗಳಿಂದ ಮೇಲ್ಮೈಮೂಲಗಳಿಂದ ನೀರು ಸರಬರಾಜು ಮಾಡಲು ಮತ್ತು ಈ ಯೋಜನೆಗಳನ್ನು ಅನುದಾನ ಲಭ್ಯತೆಗನುಗುಣವಾಗಿ ಹಂತಹಂತವಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಅಲ್ಲದೆ, ಚೀಳೂರು ಹೋಬಳಿಯ 3 ಗ್ರಾಮಗಳಲ್ಲಿ ಡೀ-ಫ್ಲೋರಿಡೇಷನ್ ಘಟಕಗಳನ್ನು 2002-03ನೇ ಸಾಲಿನಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) 2001-02ನೇ ಸಾಲಿನಲ್ಲಿ ಚೀಳೂರು ಹೋಬಳಿಯಲ್ಲಿ ಕೊರೆದಿರುವ ಕೊಳವೆಬಾವಿಗಳ ಗ್ರಾಮವಾರು ವಿವರಗಳು ಈ ಕೆಳಕಂಡಂತಿವೆ:

ಕ್ರ.ಸಂ.	ಗ್ರಾಮ	ಕೊರೆದ ಕೊಳವೆ ಬಾವಿಗಳ ಸಂಖ್ಯೆ
1	ಚೀಳೂರು ಕಿಶೋರ್ ಕಾನ್ಟೆಂಟ್	1
2	ತುರುಕೇಶಪಲ್ಲಿ	1
3	ವೆಂಕಟೇಶಪಲ್ಲಿ	2
4	ಮಂಜುನಾಥಪುರ	1
5	ಕೊಂಡವಾರಿಪಲ್ಲಿ	1
6	ದಿಗವಪಾಯಲವಾರಿಪಲ್ಲಿ	1
7	ಮಾಮಿಡಿಮಾಕಲಪಲ್ಲಿ	1
8	ವಡ್ಡಿವಾಡ್ಲಪಲ್ಲಿ	1
9	ಮಾಚನಪಲ್ಲಿ	1
	ಒಟ್ಟು	10

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕಿನ ಚೀಳೂರು ಹೋಬಳಿಯಲ್ಲಿ ನೀರಿನಲ್ಲಿ ಫ್ಲೋರೋಸಿಸ್ ಅಂಶ ಜಾಸ್ತಿಯಾಗಿದೆ. ನೀರಿನಲ್ಲಿ ಅಧಿಕ ಫ್ಲೋರೈಡ್ ಅಂಶವಿರುವದು ಮತ್ತು ಇದರಿಂದಾಗಿ ಗ್ರಾಮೀಣ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಆದರೆ ಎಷ್ಟು ವರ್ಷಗಳಿಂದ ಈ ಫ್ಲೋರೋಸಿಸ್ ಅಂಶವಿದೆ, ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಇವೆಲ್ಲದರ ಬಗ್ಗೆ ಸರಿಯಾಗಿ ವಿವರಗಳನ್ನು ಕೊಟ್ಟಿಲ್ಲ. ಈ ಫ್ಲೋರೇಸಿಸ್ ಖಾಯಿಲೆ ಬಹಳ ದಿನಗಳಿಂದ ಬಾಗೇಪಲ್ಲಿ ತಾಲ್ಲೂಕು ಮತ್ತು ನಮ್ಮ ಏರಿಯಾಗಳಲ್ಲಿ ಇದೆ. ಬೋರ್‌ವೆಲ್‌ಗಳಲ್ಲಿ ಹೆಚ್ಚು ಕೆಳಗೆ ನೀರು ಹೋದಷ್ಟು ಈ ಫ್ಲೋರೈಡ್ ಅಂಶ ಜಾಸ್ತಿ ಇರುತ್ತದೆ. ಆ ನೀರನ್ನು

ಕುಡಿಯುವುದರಿಂದ ಖಾಯಿಲೆಗಳು ಬಂದು ಜನರಿಗೆ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ಇವತ್ತಿನವರೆಗೂ ಸರ್ಕಾರದವರು ಏನೂ ಗಮನ ಹರಿಸಿಲ್ಲ. ನಮ್ಮ ಕ್ಷೇತ್ರದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಇದರ ಬಗ್ಗೆ ಏನಾದರೂ ಹೇಳುತ್ತಾರೆಯೇ ಎಂದು ತಮ್ಮ ಮೂಲಕ ಕೇಳುತ್ತೇನೆ.

ಅಧ್ಯಕ್ಷರು : ಬಾಗೇಪಲ್ಲಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರಾದ ಶ್ರೀ ಸಂಪಂಗಿಯವರು ಕೇಳಲಿ.

ಶ್ರೀ ಕೆ.ಶ್ರೀನಿವಾಸ ಗೌಡ ಕುದುವನಹಳ್ಳಿ : ಈ ಸಮಸ್ಯೆ ಬಾಗೇಪಲ್ಲಿ ಗುಡಿಬಂಡೆ ಹಾಗೂ ಚಿಂತಾಮಣಿಗೆ ಮಾತ್ರ ಸೀಮಿತವಲ್ಲ. ಕೋಲಾರ ತಾಲ್ಲೂಕಿನಲ್ಲಿ 14 ಹಳ್ಳಿಗಳಲ್ಲಿ ಈ ಫ್ಲೋರಸಿಸ್ ಅಂಶವಿರುವುದು, ಅದಕ್ಕೆ ಶಾಶ್ವತವಾಗಿ ಏನಾದರೂ ಪರಿಹಾರ ಮಾಡುತ್ತೀರಾ?

ಸ್ರೀ ಎನ್. ಸಂಪಂಗಿ : ಒಟ್ಟು 509 ಹಳ್ಳಿಗಳಲ್ಲಿ ಈ ಫ್ಲೋರೈಡ್‌ನ ಸಮಸ್ಯೆ ಇದೆ. ಅದರಲ್ಲೂ ಬಾಗೇಪಲ್ಲಿಯ ಅತೀ ಹೆಚ್ಚು ಹಳ್ಳಿಗಳಲ್ಲಿ ಫ್ಲೋರೈಡ್ ಅಂಶ ಇದೆ. ನಮ್ಮ ಮಂತ್ರಿಯವರಾದ ಮಾನ್ಯ ಘೋರ್ಪಡೆಯವರೂ ಕೂಡ ಇದರ ಬಗ್ಗೆ ಚರ್ಚೆ ಮಾಡಿದರು. ಹಾಗೂ ಅದಕ್ಕೆ ರಾಜೀವ್‌ಗಾಂಧಿ ಡ್ರಿಂಕಿಂಗ್ ವಾಟರ್ ಮಿಷನ್ ಯೋಜನೆಯಲ್ಲಿ ವಿಶ್ವಬ್ಯಾಂಕಿನ ಅಡಿಯಲ್ಲಿ ನೀರು ಕೊಡುತ್ತೇವೆ ಎಂದು ಎರಡು ಸದನಲ್ಲಿ ಕೂಡ ಅದೇ ಉತ್ತರವನ್ನು ಕೊಟ್ಟರು. ಆದರೆ ಇವತ್ತಿನವರೆಗೂ ಅದನ್ನು ಜಾರಿಗೆ ಮಾಡಲಿಲ್ಲ. ಆದರೆ ಇವತ್ತು ನನ್ನ ಕ್ಷೇತ್ರವಾದ ಬಾಗೇಪಲ್ಲಿ ಮತ್ತು ಗುಡಿಬಂಡೆಯಲ್ಲಿ ಸುಮಾರು 300 ಹಳ್ಳಿಗಳಲ್ಲಿ ಸುಮಾರು 20 ಸಾವಿರ ಜನ ಈ ಫ್ಲೋರೊಸಿಸ್ ಖಾಯಿಲೆಗೆ ತುತ್ತಾಗಿದ್ದಾರೆ. ಆದರೆ ಇದರ ಬಗ್ಗೆ ಚರ್ಚೆಯಾಗುತ್ತಿದೆಯೇ ವಿನಃ ಪರಿಹಾರ ಇಲ್ಲ. ಇವತ್ತು ಮಕ್ಕಳು ಹುಟ್ಟುತ್ತಲೇ ಅಂಗವಿಕಲ ಪಡೆಯತಕ್ಕಂಥ ವಿಚಾರದಲ್ಲಿ ಬಾಗೇಪಲ್ಲಿ ಕೂಡ ಬಂದಾಗಿದೆ. ಅದು ಮಾನ್ಯ ಘೋರ್ಪಡೆ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಬಂದಿದೆ. ಇದಕ್ಕೆ ಪರಿಹಾರ ಮಾಡುತ್ತೇವೆಂದು ಎರಡು ಅಧಿವೇಶನದಲ್ಲಿ ಕೂಡ ಹೇಳಿದ್ದಾರೆ. ಆದರೆ ಅದು ಪತ್ರಿಕೆಯಲ್ಲಿ ಮಾತ್ರ ಇದೆ. ಆದರೆ ಜಾರಿಗಂತೂ ಬಂದಿಲ್ಲ. ಇದು ಬಹಳ ದೊಡ್ಡ ವಿಚಾರ ಆಗಿರುವುದರಿಂದ ಇದಕ್ಕೆ ಮೂವರು ಮಂತ್ರಿಗಳು ಸಂಬಂಧ ಪಡುತ್ತಾರೆ. ಒಬ್ಬರು ಆರ್‌ಡಿಪಿಆರ್, ಇನ್ನೊಬ್ಬರು ಮೈನ್ಸ್ ಅಂಡ್ ಮಿನರಲ್ಸ್ ಹಾಗೂ ಆರೋಗ್ಯ ಮಂತ್ರಿಗಳು. ನಮ್ಮ ಭಾಗದಲ್ಲಿ ದಿನನಿತ್ಯ ಮರಗಳನ್ನು ಲಾರಿಗಳಲ್ಲಿ ನೂರು ಇನ್ನೂರು ಲೋಡ್ ಸಾಗಿಸುತ್ತರೆ ಇದ್ದಾರೆ. ಈ ಫ್ಲೋರೈಡ್ ಸಮಸ್ಯೆ ಏಕೆ ಬಂತು ಎಂದು ಕೇಳಿದ್ದಕ್ಕೆ ಅಂತರ್ಜಲ ಮಟ್ಟ ಕುಸಿಯುತ್ತಿದೆ, ಅಂತರ್ಜಲ ಮಟ್ಟ ಕುಸಿಯುತ್ತಿರುವುದಕ್ಕೆ ಕಾರಣ ಏನೆಂದರೆ ಮರಳನ್ನು ಸಾಗಿಸುತ್ತಿರುವುದು ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದುದರಿಂದ ಈ ಅಂತರ್ಜಲ ವಿಚಾರ ಬಂದಾರ ಮೈನ್ಸ್ ಅಂಡ್ ಮಿನರಲ್ಸ್ ಮಂತ್ರಿಯವರು ಉತ್ತರನೀಡಬೇಕಾಗುತ್ತದೆ. ಮತ್ತು ಇದರಿಂದ ಖಾಯಿಲೆ ಹರಡತಕ್ಕಂಥ ವಿಚಾರದಲ್ಲಿ ಹೇಳಬೇಕಾದರೆ ಆರೋಗ್ಯ ಮಂತ್ರಿಗಳೂ ಸಹ ಸದನದಲ್ಲಿ ಹಾಜರಿರಬೇಕಾಗುತ್ತದೆ. ಆದುದರಿಂದ ಈ ಒಂದು ವಿಚಾರದಲ್ಲಿ ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ತಾವು ಬರೆದು ಕಳುಹಿಸಿ.

ಶ್ರೀ ಕೆ. ಶ್ರೀನಿವಾಸ ಗೌಡ ಕುದುವನಹಳ್ಳಿ : ಮಾನ್ಯ ಅಧ್ಯಕ್ಷರೆ, ಈ ಫ್ಲೋರೋಸಿಸ್ ನಮ್ಮ ಜಿಲ್ಲಾದ್ಯಾಂತ ಎಲ್ಲಾ ತಾಲ್ಲೂಕುಗಳಲ್ಲಿ ಇದೆ. ಮಾನ್ಯ ಅಧ್ಯಕ್ಷರ ಕ್ಷೇತ್ರದಲ್ಲೂ ಕೂಡ ಈ ಫ್ಲೋರೋಸಿಸ್ ಇದೆ. ನಾವು ಬೋರ್‌ವೆಲ್‌ಗಳನ್ನು 700 ರಿಂದ 800 ಅಡಿಯವರೆಗೆ ಕೊರೆದಿರುವುದೆ ಆಗಿದೆ. ನಮಗೆ ವಾಟರ್ ಮ್ಯಾನೇಜ್‌ಮೆಂಟ್‌ನಲ್ಲಿ ನೀರನ್ನು 120 ರಿಂದ 125 ಅಡಿಯಲ್ಲಿ ನೀರು ಬರದ ಹೊರತು ಈ ಫ್ಲೋರೋಸಿಸ್ ಅನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಇದಕ್ಕೆ ಏನಾದರೂ ಚಿಂತನೆ ಮಾಡಬೇಕೇ ವಿನಃ ನಾವು ಕೇವಲ ಔಷಧ ಹಾಕುತ್ತೇವೆ, ಆಲಂಹಾಕುತ್ತೇವೆ, ನೀರು ಕೊಡುತ್ತೇವೆ ಎಂದು ಹೇಳಿದರೆ ಏನೂ ಉಪಯೋಗ ಆಗುವುದಿಲ್ಲ. ಅದಕ್ಕೆ ಬಹಳ ಮುಖ್ಯವಾಗಿ ಎಲ್ಲೆಲ್ಲಿ ಈ ತರಹದ ಹಳ್ಳಿಗಳನ್ನು ಗುರುತಿಸಿದ್ದೀರಿ, ಆ ಹಳ್ಳಿಗಳಲ್ಲಿರುವ ಕೆರೆಗಳಲ್ಲಿ ನೀರು ಹೋಗದ ಹಾಗೆ ಮಾಡಿದರೆ ಕನಿಷ್ಟ ಈ ಫ್ಲೋರೋಸಿಸ್ ಅಂಶ ಕೂಡಿದ ನೀರು ಮೇಲೆ ಇರುವುದರಿಂದ ಇದು, ಕಡಿಮೆಯಾಗುತ್ತದೆಯೇ ಎನ್ನುವುದನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ ಅದನ್ನು ತರದ ಹೊರತು ನಮ್ಮ ಜಿಲ್ಲೆಯಲ್ಲಿ ಶಾಶ್ವತವಾಗಿ ತೊಂದರೆಯಾಗುತ್ತದೆ. ಇದರ ಬಗ್ಗೆ ಐದಾರು ವರ್ಷಗಳಿಂದ ಇದನ್ನೇ ಹೇಳುತ್ತಾ ಇದ್ದೇವೆ. ಎಲ್ಲಾ ಶಾಸಕರು ಹೇಳುತ್ತಿದ್ದಾರೆ. ಆದರೆ ಸರ್ಕಾರ ಇದರ ಬಗ್ಗೆ ಗಮನ ಕೊಡುತ್ತಿಲ್ಲ. ಕೋಲಾರದಲ್ಲಿ ಬರ ಇದೆ, ಹಾಳಾಗಿ ಹೋಗಲಿ ಎನ್ನುವ ಭಾವನೆ ಇದೆಯೊ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ಬಹಳ ಜರೂರಾಗಿ ಕ್ರಮ ಜರುಗಿಸಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ನಾಗರಾಜು : ಮಾನ್ಯ ಅಧ್ಯಕ್ಷರೆ, ಏನು ಮಾನ್ಯ ಶ್ರೀನಿವಾಸ ಗೌಡರು ಈ ಸಭೆ ಮುಂದೆ ಕೋಲಾರ ಜಿಲ್ಲೆಯಲ್ಲಿ ಇರುವಂತಹ ಫ್ಲೋರೋಸಿಸ್ ಬಗ್ಗೆ ಗಮನವನ್ನು ಸೆಳೆದಿದ್ದಾರೆ ಇದಕ್ಕೆ ನಾವು ವೈಜ್ಞಾನಿಕವಾಗಿ ಸ್ಪಂದಿಸದೆ ಇದ್ದರೆ ಜನರು ಶಾಸಕರ ಮತ್ತು ಮಂತ್ರಿಗಳ ಮನೆ ಮುಂದೆ ಬರುವಂತಹ ಪರಿಸ್ಥಿತಿ ಇದೆ. ಈಗಾಗಲೇ ಬಹಳಷ್ಟು ಜನರಿಗೆ ಈ ಸಮಸ್ಯೆಯಿಂದ ಹಲ್ಲುಗಳು ಹಾಗೂ ಎಲುಬು ಸವೆದು ಹೋಗಿವೆ. ಆದುದರಿಂದ ಸರ್ಕಾರ ಕೂಡಲೆ ಒಂದು ಸಮಿತಿಯನ್ನು ರಚನೆ ಮಾಡಿ ವೈಜ್ಞಾನಿಕವಾಗಿ ಇದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯುವುದಕ್ಕೆ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ಕ್ಷೇತ್ರದ ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಕುಡಿಯುವ ನೀರಿನ ಅಭಾವವಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಆದರೆ ಕುಡಿಯುವ ನೀರಿನ ಅಭಾವವಿಲ್ಲ. ಆದರೆ ಅಲ್ಲಿ ಫ್ಲೋರೈಡ್‌ನಿಂದ ನೀರು ಕುಡಿಯುವುದಕ್ಕೆ ಯೋಗ್ಯವಾಗಿಲ್ಲ ಎನ್ನುವ ಪರಿಸ್ಥಿತಿ ಒದಗಿಸಿದೆ. ಕರ್ನಾಟಕ ರಾಜ್ಯದಲ್ಲಿ ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಒಟ್ಟು 56,800 ಹ್ಯಾಬಿಟೇಷನ್‌ಗಳಿಗೆ ನೀರು ಕೊಡತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಇದೆ. ಅದರಲ್ಲಿ 21,000 ಹ್ಯಾಬಿಟೇಷನ್‌ಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಫ್ಲೋರೈಡ್ ಇರಬಹುದು, ಬ್ಯಾಕಿಶ್‌ನೆಸ್ ಇರಬಹುದು ಸೈಟ್ರೇಟ್ ಇರಬಹುದು ಅಥವಾ ಐರನ್ ಇರಬಹುದು, ಈ ರೀತಿಯಾದಂತಹ ನೀರು ಕುಡಿಯುವುದಕ್ಕೆ ಯೋಗ್ಯವಲ್ಲದೆ ಇರತಕ್ಕಂಥ ಪರಿಸ್ಥಿತಿ ಇದೆ. ಅದರಲ್ಲಿ ಕೋಲಾರ ಜಿಲ್ಲೆಯಲ್ಲಿ 253 ಗ್ರಾಮಗಳಲ್ಲಿ ಈ ಫ್ಲೋರೈಡ್‌ನ ತೊಂದರೆ ಇದೆ. ಅದರಲ್ಲಿ ಚೇಳೂರು ಹೋಬಳಿಯಲ್ಲಿ 49 ಗ್ರಾಮಗಳಲ್ಲಿ ಈ ಫ್ಲೋರೈಡ್‌ನಿಂದ ನೀರು ಕುಡಿಯುವುದಕ್ಕೆ ಆಗದೆ ಇರುವಂತಹ ತೊಂದರೆ ಇದೆಯೆಂದು ಗೊತ್ತಿದೆ.

ಇದನ್ನು ಹೋಗಲಾಡಿಸುವುದಕ್ಕೆ ಏನು ಮಾಡಬೇಕೆಎನ್ನುವುದು ಒಂದು ದೊಡ್ಡ ಸಮಸ್ಯೆ. ಅನೇಕ ರೀತಿಯ ವಿಚಾರಗಳನ್ನು ಸರ್ಕಾರದ ಮಟ್ಟದಲ್ಲಿ ಮಾಡಿದ್ದೇವೆ. ಈ ಫ್ಲೋರೈಡ್‌ಅನ್ನು ತಪ್ಪಿಸಬೇಕಾದರೆ ಮೇಲ್ಮೈಯಿಂದ ನೀರು ತರಬೇಕು. ನಾವು ನೀರಿಗಾಗಿ ಎಷ್ಟು ಆಳವಾಗಿ ಹೋಗುತ್ತೇವೆ ಅಷ್ಟು ಫ್ಲೋರೈಡ್ ಅಂಶ ಜಾಸ್ತಿಯಾಗುತ್ತಿದೆ. ಅದಕ್ಕೆ ಮೇಲ್ಮೈನಿಂದ ನೀರು ತಂದು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ವಿಚಾರ ಮಾಡಿ ನಾವು ಕನ್‌ಸೆಪ್ಟ್ಯುಯಲ್ ಡಿಸೈನ್ ರಿಪೋರ್ಟ್ ತರಿಸಿದ್ದೇನೆ. ಅದನ್ನು ತರಿಸಿದಮೇಲೆ, ಅವರು ಏನು ಹೇಳಿದರು ಎಂದರೆ 12 ಕೆರೆಗಳ ಮುಖಾಂತರ ನೀರನ್ನು ಒದಗಿಸಿದಾಗ ಈ ಫ್ಲೋರೈಡ್‌ನ ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ವರದಿ ಕೊಟ್ಟರು. ಆದರೆ ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ 12 ಕೆರೆಗಳಲ್ಲಿ 10 ಕೆರೆಗಳು ನೀರಾವರಿಗೆ ತೊಡಗಿಸಿದಂತಹ ಕೆರೆಗಳು ಇದ್ದವು. ಅಲ್ಲಿ ಮಳೆ ಬರದೆ ಇದ್ದಾಗ ಕೆರೆಗಳು ಸಂಪೂರ್ಣವಾಗಿ ತುಂಬುತ್ತಾ ಇರಲಿಲ್ಲ. ಹಾಗೂ ಒಣಗಿ ಹೋಗತಕ್ಕಂಥ ಪರಿಸ್ಥಿತಿ ಇತ್ತು. ಅದೂ ಅಲ್ಲದೆ ಅಲ್ಲಿರತಕ್ಕಂಥ ರೈತರು ಇದನ್ನು ವಿರೋಧ ಮಾಡಿ ನೀರಾವರಿಗೆ ಇರುವಂತಹ ನೀರನ್ನು ಕುಡಿಯುವುದಕ್ಕೆ ಉಪಯೋಗಿಸುತ್ತೀರಿ ಎಂದು ಪ್ರತಿರೋಧ ಬಂದಿದ್ದರಿಂದ ಈ ಯೋಜನೆಯನ್ನು ಕೈಬಿಟ್ಟಿದ್ದಾಗಿದೆ. ಆದುದರಿಂದ ಇದಕ್ಕೆ ಬೇರೆ ವಿಚಾರ ಏನು ಮಾಡಿದ್ದೇವೆಂದರೆ ಬೋರ್‌ನಲ್ಲಿ ಬರುವಂತಹ ನೀರನ್ನು ಶುದ್ಧೀಕರಣ ಮಾಡಬೇಕಾದರೆ ಅಲ್ಲಿ ಡಿ-ಫ್ಲೋರೈಡ್‌ಷನ್ ಪ್ಲಾಂಟ್‌ಗಳನ್ನು ಹಾಕಬೇಕು. ಅಥವಾ ಒಂದೊಂದು ಬೋರ್‌ವೆಲ್‌ಗೆ ಟ್ರೀಟ್‌ಮೆಂಟ್ ಪ್ಲಾಂಟ್ ಹಾಕಬೇಕು. It is a costly affair. ಇದರಿಂದ ಒಂದು ಯುನಿಟ್‌ಗೆ ಹತ್ತು ಲಕ್ಷ ರೂಪಾಯಿ ಆಗುತ್ತದೆ. ಆದುದರಿಂದ ಈಗಾಗಲೇ ನಾವು ರಾಜ್ಯದಲ್ಲಿ ನೂರು ಡಿ-ಫ್ಲೋರೈಡ್‌ಷನ್ ಪ್ಲಾಂಟ್ ಅನ್ನು ಹಾಕಿ ಶುದ್ಧೀಕರಣ ಮಾಡಬೇಕೆಂದು ನಿರ್ಣಯಮಾಡಿದ್ದೇವೆ. ಅದರಲ್ಲೂ ಸಹ 13 ಪ್ಲಾಂಟ್‌ಗಳನ್ನು ಕೋಲಾರ ಜಿಲ್ಲೆಯಲ್ಲಿ ಹಾಕಬೇಕು ಎಂದು ನಿರ್ಣಯ ಮಾಡಿ ಮೂರು ಪ್ಲಾಂಟ್‌ಗಳನ್ನು ಚೇಳೂರು ಹೋಬಳಿಯಲ್ಲಿ ಹಾಕಿ ನೀರನ್ನು ಶುದ್ಧೀಕರಣ ಮಾಡಬೇಕೆಂದು ನಿರ್ಧಾರವನ್ನು ತೆಗೆದುಕೊಂಡಿದೆ. ಇದು ಬಹಳ ಕಾಸ್ಟಲಿ ಆಗುತ್ತಿರುವುದರಿಂದ ಇದರ ಮೂಲಕವೇ ಹೋಗುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕಿಂತ ಕಡಿಮೆ ಖರ್ಚಿನಿಂದ ಹೆಚ್ಚು ಶುದ್ಧೀಕರಣಗೊಳಿಸತಕ್ಕಂಥ ಅನೇಕ ಡಿವೈಸಸ್‌ಗಳನ್ನೂ ಶೋಧ ಮಾಡುವುದಕ್ಕೆ ಅನೇಕ ತಜ್ಞರನ್ನು ಕರೆಸಿ ಚರ್ಚೆ ನಡೆಸಿದ್ದೇವೆ. ಇದು ಬಂದಕೂಡಲೇ ನೀರಿನ ತೊಂದರೆಯನ್ನು ಬಗೆಹರಿಸುವಂತಹ ನಿಟ್ಟಿನಲ್ಲಿ ಸರ್ಕಾರ ಸರ್ವ ಪ್ರಯತ್ನ ಮಾಡುತ್ತೆದೆಂದು ಹೇಳುತ್ತೇನೆ.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೆ, ಇಲಾಖೆಯವರು ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ, ಎರಡನೆಯದಾಗಿ ನಾವು ಶಾಸಕರಿಗೆ ಪತ್ರವನ್ನು ಬರೆದರೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ, ಚೇಳೂರು ಹೋಬಳಿಯಲ್ಲಿ ಓವರ್ ಹೆಡ್ ಟ್ಯಾಂಕ್ ಇವತ್ತೋ, ನಾಳೆಯೋ ಬಿದ್ದು ಹೋಗುವ ಸ್ಥಿತಿಯಲ್ಲಿದೆ. ಇದರ ಬಗ್ಗೆ ನಾನು ಕಾಗದಗಳನ್ನು ಬರೆದಿದ್ದೇನೆ, ಅಲ್ಲಿ ಏಳು ಸಾವಿರ ಜನರು ಇದ್ದಾರೆ, ಇವರ ಗತಿ ಏನು? ಇವರು ಯಾವ ಪತ್ರಕ್ಕೂ ಉತ್ತರವನ್ನು ಕೊಟ್ಟಿಲ್ಲ, ತಾವೂ ಸಹ ಶಾಸಕರು ಪತ್ರವನ್ನು ಬರೆದರೆ ಅಧಿಕಾರಿಗಳು ಜವಾಬು ಕೊಡಬೇಕೆಂದು ಸಕ್ಯುಲರ್ ಕೊಟ್ಟಿದ್ದೀರಿ, ನಾನು ಈ ವಿಚಾರವನ್ನು ಎರಡೂವರೆ ವರ್ಷಗಳ ಹಿಂದೆ ಇಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಸಂಬಂಧಪಟ್ಟವರಿಗೆ ಕಾಗದ ಬರೆದರೆ ಉತ್ತರವನ್ನು ಕೊಡದಿದ್ದರೆ ನಾವು ಏನು ಮಾಡಬೇಕೆಂದು ಹೇಳಿ. ಈಗ ಚೇಳೂರು ಹೋಬಳಿಯಲ್ಲಿ ಓವರ್ ಹೆಡ್ ಟ್ಯಾಂಕ್ ಬಿದ್ದು ಹೋಗುತ್ತದೆ, ಇದು ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಪಟ್ಟಲ್ಲವೇ? ದಯವಿಟ್ಟು ಈ ವಿಷಯವನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಿ, ಅಧಿಕಾರಿಗಳಿಗೆ ಇನ್‌ಸ್ಟ್ರಕ್ಷನ್ ಕೊಡಿ.

ಶ್ರೀ ಎ. ನಾಗರಾಜ : ಮಾನ್ಯ ಅಧ್ಯಕ್ಷರೆ, ಈ ವಿಚಾರ ಬಹಳ ಗಹನವಾದಂತಹ ವಿಚಾರವಾಗಿರುವುದರಿಂದ ಸರ್ಕಾರ ಟೈಮ್ ಬೌಂಡ್ ಪ್ರೋಗ್ರಾಂ ಹಾಕಿ ಕೊಳ್ಳಬೇಕಾಗುತ್ತದೆ. ಇಲ್ಲಿ ಸುಮ್ಮನೆ ವೇಗ್ ಆಗಿ ಉತ್ತರ ಹೇಳಿದರೆ ಆಗುವುದಿಲ್ಲ.

Mr. Speaker ; The Government should take some immediate action about this flouride and all those things. ಜನರು ಸತ್ತು ಹೋದ ಮೇಲೆ ಮಾಡುತ್ತಿರಾ?

ಶ್ರೀ ಚೌಡರೆಡ್ಡಿ : ನಾನು ಓವರ್ ಹೆಡ್ ಟ್ಯಾಂಕ್ ವಿಚಾರವಾಗಿ ಅನೇಕ ಸಾರಿ ಪತ್ರವನ್ನು ಬರೆದಿದ್ದೇನೆ, ಈ ಚೇಳೂರು ಹೋಬಳಿಯಲ್ಲಿ ಇರುವ ಓವರ್ ಹೆಡ್ ಟ್ಯಾಂಕ್ ನಾಳೆ ನಾಳಿದ್ದರಲ್ಲಿ ಬಿದ್ದು ಹೋಗುವುವಂತಹ ಪರಿಸ್ಥಿತಿಯಲ್ಲಿದೆ, ಪರಿಣಾಮವಾಗಿ ಇಲ್ಲಿ ಎಂಟು ಸಾವಿರ ಜನರಿಗೆ ಕುಡಿಯುವ ನೀರು ಇಲ್ಲದ ಹಾಗೆ ಆಗುತ್ತದೆ, ಆದುದರಿಂದ ಇದರ ಬಗ್ಗೆ ದಯವಿಟ್ಟು ಕ್ರಮ ತೆಗೆದುಕೊಳ್ಳಿ.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಸದಸ್ಯರಾದ ಚೌಡರೆಡ್ಡಿಯವರು ಪತ್ರ ಬರೆದಿದ್ದಾರೆ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೇ, ತಾವು ಸಿಟ್ಟು ಮಾಡಿಕೊಳ್ಳುವಂತಹ ಸ್ವಭಾವದವರೇ ಅಲ್ಲ, ನಿಮಗೆ ಸಿಟ್ಟು ಬಂದಿರುವುದನ್ನು ನಾನು ನೋಡೇ ಇಲ್ಲ. ತಮಗೂ ಸಹ ಸಿಟ್ಟು ಬಂದರೆ ಈ ಕುಡಿಯುವ ನೀರಿನ ವಿಚಾರದಲ್ಲಿ ಸರ್ಕಾರ ಎಷ್ಟು ಮಂದಗತಿಯಲ್ಲಿ ಕೆಲಸ ಮಾಡುತ್ತಿದೆ, ಎಂಬುದಕ್ಕೆ ತಮ್ಮ ಸಿಟ್ಟೇ ಇದಕ್ಕೆ ಸೂಚಕವಾಗಿದೆ. ಆದುದರಿಂದ ಮಾನ್ಯ ಎ. ನಾಗರಾಜ್‌ರವರು ಹೇಳಿದ ಹಾಗೆ ಇದಕ್ಕೆ ಏನಾದರೂ ಕಾಲಬದ್ಧವಾದಂತಹ ಕಾರ್ಯಕ್ರಮವನ್ನು ಹಾಕಿ ಇಷ್ಟನೇ ತಾರೀಖಿ ಮುಗಿದ ನಂತರ ರಾಜ್ಯದಲ್ಲಿ ಎಲ್ಲಾ ಈ ಫ್ಲೋರೈಡ್ ರಹಿತವಾದಂತಹ ನೀರನ್ನು ಈ ಕೋಲಾರ ಜಿಲ್ಲೆಯಲ್ಲಾಗಲಿ, ಇತರ ಕಡೆಗಳಲ್ಲಿ ಆಗಲಿ ಪೂರೈಕೆ ಮಾಡುವಂಥಾದ್ದಕ್ಕೆ ಸರ್ಕಾರ ಬದ್ಧವಾಗಿ ಇದೆಯೇ, ಅಥವಾ ಇಲ್ಲವೇ, ಎಂಬುದನ್ನು ಸರ್ಕಾರ ದಯವಿಟ್ಟು ತಿಳಿಸಬೇಕು, ತಾವು ಇದರ ಬಗ್ಗೆ ಇಷ್ಟು ಸಿಟ್ಟು ಮಾಡಿಕೊಂಡದ್ದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ, ಇದಕ್ಕೆ ಸಂಬಂಧಪಟ್ಟಂತಹ ಎಲ್ಲಾ ಎಂ.ಎಲ್.ಎಗಳನ್ನು ಕರೆಸಿ ಒಂದು ಮೀಟಿಂಗ್ ಮಾಡಿ.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಚೌಡರೆಡ್ಡಿಯವರು ಪತ್ರ ಬರೆದರೂ ಸಂಬಂಧಪಟ್ಟ ಅಧಿಕಾರಿಗಳು ಉತ್ತರವನ್ನು ಕೊಟ್ಟಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಇದು ನನ್ನ ಗಮನಕ್ಕೆ ಬಂದಿಲ್ಲ, ಇವತ್ತೇ ಇದಕ್ಕೆ ಸಂಬಂಧಪಟ್ಟಂತಹ ಕಾಗದ ಪತ್ರಗಳನ್ನು ತರಿಸಿ. ಅದನ್ನು ಪರಿಶೀಲಿಸಿ ಅದಕ್ಕೆ ಯೋಗ್ಯವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇದು ಒಂದು

ದೊಡ್ಡ ಸಮಸ್ಯೆಯಾಗಿರುವುದರಿಂದ ತಮ್ಮ ಸಲಹೆ ಮೇರೆ ಇನ್ನು ಮೂರು ನಾಲ್ಕು ದಿವಸಗಳೊಳಗೆ ಕೋಲಾರ ಮತ್ತು ತುಮಕೂರು ಹಾಗೂ ರಾಜ್ಯದಲ್ಲಿಎಲ್ಲೆಲ್ಲಿ ಈ ರೀತಿ ಆಗಿದೆ, ಆ ಎಲ್ಲಾ ಸಂಬಂಧಪಟ್ಟಂತಹ ಶಾಸಕರುಗಳನ್ನು, ಅಧಿಕಾರಿಗಳನ್ನು ಕರೆಸಿ ಮೀಟಿಂಗ್ ಮಾಡಿ ಯೋಗ್ಯವಾದಂತಹ ಕ್ರಮವನ್ನು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇನೆ.

ಬಾಗಲಕೋಟೆ ಜಿಲ್ಲೆಯಲ್ಲಿ ರಕ್ತ ಮಾಹಿತಿ ಕೇಂದ್ರ ಪ್ರಾರಂಭಿಸುವುದು

24(73) ಶ್ರೀ ಪೂಜಾರ್ ಪಿ.ಹೆಚ್ (ಬಾಗಲಕೋಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ರಕ್ತ ಮಾಹಿತಿ ಕೇಂದ್ರಗಳನ್ನು ಆರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ರಕ್ತ ಮಾಹಿತಿ ಕೇಂದ್ರದ ರಚನೆಯ ರೂಪುರೇಷೆಗಳೇನು?

ಇ) ಈ ಕೇಂದ್ರಗಳನ್ನು ಯಾವಾಗಿನಿಂದ ಪ್ರಾರಂಭಿಸಲಾಗುತ್ತದೆ?

ಈ) ಪ್ರಾಯೋಗಿಕವಾಗಿ ಈಗಾಗಲೇ ಎಲ್ಲೆಲ್ಲಿ ಸ್ಥಾಪಿಸಲಾಗಿದೆ? ಇವುಗಳ ಗುರಿ, ಪ್ರಗತಿ ಯಾವ ರೀತಿ ಇದೆ?

ಉ) ಬಾಗಲಕೋಟೆ ಜಿಲ್ಲೆಯಲ್ಲಿ ಈ ಕುರಿತಂತೆ ಹಾಕಿಕೊಂಡಕಾರ್ಯಕ್ರಮಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಉತ್ತರವನ್ನು ಬಹಳ ಸೊಗಸಾಗಿ ಕೊಟ್ಟಿದ್ದಾರೆ, ನಾನು ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ರಕ್ತ ಮಾಹಿತಿ ಕೇಂದ್ರಗಳನ್ನು ಆರಂಭಿಸಲು ಸರ್ಕಾರ ಉದ್ದೇಶಿಸಿದೆಯೇ? ಎಂದು ಕೇಳಿದ್ದ ಪ್ರಶ್ನೆಗೆ ಸರ್ಕಾರದಿಂದ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಮತ್ತೆ ಈ ಕೇಂದ್ರದ ರಚನೆಯ ರೂಪುರೇಷೆಗಳ ಬಗ್ಗೆ ಉದ್ಭವಿಸುವುದಿಲ್ಲವೆಂದು ಉತ್ತರಿಸಿದ್ದಾರೆ. ನಾವು ತಿಳಿದುಕೊಂಡಿದ್ದು ಏನಂದರೆ ಜೀವದಾನ ಮಾಡುವಂತಹ ರಕ್ತದ ಬಗ್ಗೆ ಈ ಸರ್ಕಾರದವಾದರೂ ವಿಶೇಷವಾದ ಪ್ರಾಧಾನ್ಯತೆಯನ್ನು ಕೊಡುತ್ತಿದೆ, ತಾಲ್ಲೂಕು ಮಟ್ಟದಲ್ಲಿ ಈ ಕೇಂದ್ರಗಳನ್ನು ತೆರೆಯುವಂತಹ ತೀರ್ಮಾನವನ್ನುಮಾಡಿದೆ ಎಂದು ನಾವು ತಿಳಿದುಕೊಂಡು ಕಳೆದ ವರ್ಷ ಸಂತೋಷವನ್ನು ಪಟ್ಟೆವು. ಹಿಂದೆ ಇದ್ದಂತಹ ಈ ಇಲಾಖಾ ಮಾನ್ಯ ಸಚಿವರು ಆಗಸ್ಟ್ 26ರಂದು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅದೇನೆಂದರೆ ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ರಕ್ತ ಲಭ್ಯತೆಯ ಮಾಹಿತಿ ಕೇಂದ್ರಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆ ಎಂದು ಹೇಳಿದ್ದಾರೆ. ಪ್ರಥಮ ಹಂತವಾಗಿ ನೂರು ಕೇಂದ್ರಗಳನ್ನು ತೆರೆಯಲು ಉದ್ದೇಶಿಸಿದ್ದು, ಎಲ್ಲಾ ಕೇಂದ್ರಗಳನ್ನು ಸಂಪೂರ್ಣ ಕಂಪ್ಯೂಟರೀಕರಣ ಮಾಡಲಾಗುವುದೆಂದು ಹೇಳಿದರು, ಅಷ್ಟೇ ಅಲ್ಲದೆ ಪ್ರತಿ ಕೇಂದ್ರಗಳಲ್ಲೂ ನಾಲ್ಕು ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಾರೆ,